**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ. ನ್ಯಾ ದಂಡಾಧಿಕಾರಿಗಳ</u>**

**<u>ನ್ಯಾಯಾಲಯ, ಕುಮಟಾ</u>**

**ಸಿ.ಸಿ. ನಂ.1149/2009**

ಸಿ.ಡಬ್ಲ್ಯು 1

ಪಿ.ಡಬ್ಲ್ಯು 1

ಸಾಕ್ಷಿದಾರರ ಹೆಸರು – ಆರ್ ಕೆ ಪಾರ್ಥಸಾರಥಿ

ತಂದೆಯ ಹೆಸರು – ಆರ್ ಕಳಸೆಗೌಡ

ವಯಸ್ಸು – 58 ವರ್ಷ

ಉದ್ಯೋಗ – ಕಾರ್ಖಾನೆಗಳ ಜಂಟಿ ನಿರ್ದೇಶಕರು

ವಾಸ್ತವ್ಯ – ಬೆಂಗಳೂರು

(ಇಂದು ದಿನಾಂಕಃ 05-03-2025 ರಂದು ಸತ್ಯಪ್ರತಿಜ್ಞೆಯ ಮೇರೆಗೆ ಪ್ರಮಾಣವಚನ ಬೋಧಿಸಲಾಯಿತು.)

**<u>ಮುಖ್ಯ ವಿಚಾರಣೆ – ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ನಾನು 03-11-2008 ರಿಂದ 12-07-2013 ರ ವರೆಗೆ ಕಾರ್ಖಾನೆಗಳ ಹಿರಿಯ ನಿರ್ದೇಶಕರು ವಿಭಾಗ 1 ಹುಬ್ಬಳ್ಳಿ ಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಉತ್ತರ ಕನ್ನಡ ಜಿಲ್ಲೆ ಕೂಡ ನನ್ನ ಕಾರ್ಯ ವ್ಯಾಪ್ತಿಯಲ್ಲಿ ಬರುತ್ತದೆ.

ಸದರಿ ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಹೊಸ ಹೆರವಟ್ಟಾದ ಸಹ್ಯಾದ್ರಿ ಕ್ಯಾಶ್ಯೂ ಪ್ರೊಸೆಸರ್ಸ ಎಂಬ ನೊಂದಾಯಿತ ಕಾರ್ಖಾನೆಯಲ್ಲಿ ಸಂಭವಿಸಿದ ಅಪಘಾತದ ಕುರಿತು ದೂರನ್ನು ನೀಡಿರುತ್ತೇನೆ. ಸದರಿ ಕಾರ್ಖಾನೆ ಕಾರ್ಖಾನೆಗಳ ಕಾಯಿದೆ 1948 ನೇದರ ಅಡಿಯಲ್ಲಿ ನೊಂದಾಯಿತವಾಗಿರುತ್ತದೆ. ಅದರ ಕಾರ್ಖಾನೆ ಪರವಾನಿಗೆ ಸಂಖ್ಯೆ MYNK 168 ಆಗಿರುತ್ತದೆ. ಸದರಿ ಕಾರ್ಖಾನೆಯ ಅನುಭವದಾರರು 1 ನೇ ಆರೋಪಿತನು ಆಗಿರುತ್ತಾನೆ. 2 ನೇ

ಆರೋಪಿಯು ಕಾರ್ಖಾನೆಯ ವ್ಯವಸ್ಥಾಪಕರಾಗಿರುತ್ತಾರೆ. ಸದರಿ ಕಾರ್ಖಾನೆಯಲ್ಲಿ ದಿಃ 19-09-2009 ರಂದು ಸಂಭವಿಸಿದ ಮಾರಣಾಂತಿಕ ಅಪಘಾತದ ಕುರಿತು ಮಾಹಿತಿ ದೊರಕಿದ ಮೇರೆಗೆ ದಿಃ 29-09-2009 ರಂದು ನಾನು ಸದರಿ ಕಾರ್ಖಾನೆಗೆ ಭೇಟಿ ನೀಡಿ ಅಪಘಾತದ ಕುರಿತು ತನಿಖೆಯನ್ನು ನಡೆಸಿರುತ್ತೇನೆ. ತನಿಖೆಯ ಭಾಗವಾಗಿ ನಾನು ಅಪಘಾತ ಸ್ಥಳದ ಪರೀಶಿಲನೆಯನ್ನು ಮಾಡಿ, ಅಪಘಾತದ ಸ್ಥಳವನ್ನು ಗುರುತು ಮಾಡಿಸಿ ಅದರ ಛಾಯಾಚಿತ್ರವನ್ನು ತೆಗೆದಿರುತ್ತೇನೆ. ಸದರಿ ಕಾರ್ಖಾನೆಯಲ್ಲಿದ್ದ ಮುರಿದು ಬಿದ್ದ ಸಿಮೆಂಟ್ ಶೀಟ್ ನ ಛಾಯಾಚಿತ್ರವನ್ನು ತೆಗೆದಿರುತ್ತೇನೆ. ಛಾವಣಿಯಲ್ಲಿ ಆದಂತಹ ರಂಧ್ರದ ಛಾಯಾಚಿತ್ರವನ್ನು ಸಹ ತೆಗೆದಿರುತ್ತೇನೆ. ಅಪಘಾತಕ್ಕೆ ಸಾಕ್ಷಿದಾರರಾದ ಶ್ರೀ ದಯಾನಂದ ಹರ್ಮಳ್ಕರ, ಆರೋಪಿ 2 ಸತೀಶ ಗಾಂವ್ಕರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಕಾರ್ಖಾನೆಯ ಅನುಭವದಾರರಾದ 1 ನೇ ಆರೋಪಿಗೆ ಕೆಲವು ದಾಖಲಾತಿಗಳನ್ನು ಸಲ್ಲಿಸಲು ತಿಳಿಸಿದ ಮೇರೆಗೆ ದಿಃ 31-10-2009 ರಂದು 1 ನೇ ಆರೋಪಿತನು ಹಲವು ದಾಖಲಾತಿಯನ್ನು ಸಲ್ಲಿಸಿರುತ್ತಾರೆ. ನಾವು 1 ನೇ ಆರೋಪಿಯನ್ನು ಕೇಳಿದಂತಹ ಗುತ್ತಿಗೆದಾರಾಗಿ ಕಾರ್ಯನಿರ್ವಹಿಸುತ್ತಿದ್ದ ದಾಸ ಶಾನಭಾಗ ರವರಿಗೆ ಸದರಿ ಕೆಲಸಕ್ಕೆ ನೀಡಿದ ವರ್ಕ ಆರ್ಡರ್ ಪ್ರತಿಯನ್ನು ಹಾಗೂ ಮೃತ ವ್ಯಕ್ತಿಯ ವೆಂಕಟ್ರಮಣ ಸುಕ್ರು ಪಟಗಾರ ದಾಸ ಶಾನಭಾಗ ರವರ ಬಳಿ ಕೆಲಸ ನಿರ್ವಹಿಸುತ್ತಿದ್ದ ಕುರಿತು ದೃಢೀಕರಣ ಪತ್ರವನ್ನು ನೀಡಲು ಸಹ ತಿಳಿಸಲಾಗಿತ್ತು. ಈ ಸಂಬಂಧ ದಿಃ 21-09-2009 ರಂದು ನಾನು ಘಟನಾ ಸ್ಥಳದಲ್ಲಿಯ ಪರಿವೀಕ್ಷಣಾ ವರದಿ ಬರೆದು 1 ನೇ ಆರೋಪಿಗೆ ನೀಡಿ, ಸ್ವೀಕೃತಿಯನ್ನು ಪಡೆದುಕೊಂಡಿರುತ್ತೇನೆ. ತದನಂತರ ಅದೇ ಸಂದರ್ಭದಲ್ಲಿ ಅಪಘಾತದ ಕುರಿತು ವರದಿಯನ್ನು ಶಾಸನಾತ್ಮಕವಾಗಿ ಸಲ್ಲಿಸಬೇಕಿದ್ದು, ಅದನ್ನು 1 ನೇ ಆರೋಪಿತನು ನಮೂನೆ 17 ರಲ್ಲಿ ಸಲ್ಲಿಸಿರುತ್ತಾನೆ. ಅದರಲ್ಲಿ ಘಟನೆಯ ವಿವರವನ್ನು ತಿಳಿಸಿರುತ್ತಾರೆ. ನಾನು ದಿಃ 07-11-2009 ರಂದು ನಮ್ಮ

ಕಚೇರಿಯಿಂದ ಆರೋಪಿತರಿಗೆ ಅಪಘಾತಕ್ಕೆ ಕಾರಣವಾದ ಉಲ್ಲಂಘನೆಗಳ ಕುರಿತು ಕಾರಣ ಕೇಳಿ ನೊಟೀಸನ್ನು ಆರ್ ಪಿ ಎ ಡಿ ಮೂಲಕ ಜಾರಿ ಮಾಡಿರುತ್ತೇನೆ.

ದಿಃ 19-09-2009 ರಂದು ಮುಂಜಾನೆ 9.30 ಗಂಟೆಗೆ ಸದ್ರಿ ಕಾರ್ಖಾನೆಯಲ್ಲಿ ಮೃತರಿಗೆ ಮಾರಣಾಂತಿಕ ಅಪಘಾತ ಸಂಭವಿಸಿರುತ್ತದೆ. ಮೃತನು ಕಾರ್ಖಾನೆಯಲ್ಲಿನ ಸುಮಾರು 17 ಅಡಿ ಎತ್ತರದ ಸಿಮೆಂಟ್ ಶೀಟ್ (fragile roof) ಮೇಲೆ ಹತ್ತಿ ಪ್ಲಾಸ್ಟ್ರಿಂಗ್ ಗೆ ಕ್ಯೂರಿಂಗ್ ಮಾಡಲು ಪ್ಲಾಸ್ಟಿಕ್ ಬಿಂದಿಗೆಯಲ್ಲಿ ನೀರು ಹಿಡಿದುಕೊಂಡು ಛಾವಣಿಯ ಮೇಲೆ ಹೋದಾಗ ಅವರ ಕೈಯಿಂದ ಪ್ಲಾಸ್ಟಿಕ್ ಬಿಂದಿಗೆ ಜಾರಿ ಬಿದ್ದು, ಛಾವಣಿಯಲ್ಲಿ ರಂಧ್ರವಾಗಿ ಅವರು ಸಹ 17 ಅಡಿ ಎತ್ತದಿಂದ ಸದರಿ ರಂಧ್ರದ ಮುಖಾಂತರ ಕೆಳಗೆ ಬಿದ್ದಿರುತ್ತಾರೆ. ಅವರು ಸದರಿ ವೇಳೆ ಯಾವುದೇ ಸುರಕ್ಷತಾ ಹೆಲ್ಮೆಟ್, ಸುರಕ್ಷತಾ ಬೆಲ್ಟ ಅಥವಾ ಕೆಲಸಕ್ಕೆ ಅವಶ್ಯವಾದ ಸುರಕ್ಷತಾ ನೆಟ್ ನ್ನು 1 ನೇ ಆರೋಪಿಯು ಒದಗಿಸಿಲ್ಲದಿರುವುದು ತಿಳಿದು ಬಂದಿರುತ್ತದೆ. ಕರ್ನಾಟಕ ಕಾರ್ಖಾನೆಯ ನಿಯಮಗಳು 1949 ರ ನಿಯಮ 79(ಎ) ಉಪನಿಯಮ ಬಿ ಅಡಿಯಲ್ಲಿ ಸಿಮಂಟ್ ಶೀಟ್ ಮೇಲೆ ಕೆಲಸ ನಿರ್ವಹಿಸಲು ಜನರನ್ನು ಕಳುಹಿಸುವಾಗ ಅನುಭವದಾರರು ಅಥವಾ ಅವರಿಂದ ಗುರುತಿಸಲ್ಪಟ್ಟ ವ್ಯಕ್ತಿಯು ವರ್ಕ ಪರವಾನಿಗೆಯನ್ನು ನೀಡಿರುವುದಿಲ್ಲ. ಅಂತಹ ವರ್ಕ ಪರವಾನಿಗೆಯಲ್ಲಿ ಯಾವ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕೆಂದು ತಿಳಿಸಬೇಕಾಗುತ್ತದೆ. ಆರೋಪಿತರಿಗೆ ಹಾಜರುಪಡಿಸಬೇಕೆಂದು ತಿಳಿಸಿದ ಕೆಲವು ದಾಖಲಾತಿಗಳನ್ನು ಅವರು ಹಾಜರುಪಡಿಸಿರುವುದಿಲ್ಲ. ಇದರಿಂದ ಆರೋಪಿತರು ದಾಖಲಾತಿಗಳನ್ನು ಹಾಜರುಪಡಿಸದೇ ಇರುವುದರಿಂದ ಕರ್ನಾಟಕ ಕಾರ್ಖಾನೆಗಳ ನಿಯಮ 1969 ನಿಯಮ 136 ನ್ನು ಉಲ್ಲಂಘಿಸಿರುತ್ತಾರೆ. ಈ ಮೇಲಿನ ಉಲ್ಲಂಘಗಳು ಕಾರ್ಖಾನೆಗಳ ಕಾಯಿದೆ ಕಲಂ 92 ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ವಾಗಿರುತ್ತದೆ.

ಸಾಕ್ಷಿಯು ನೋಡಿ ಗುರುತಿಸಿದ ಫಾರಂ ನಂ. 17 ನ್ನು ನಿ.ಪಿ. 1 ಎಂದು,

ಘಟನಾ ಸ್ಥಳ ಪರಿವೀಕ್ಷಣಾ ವರದಿಯನ್ನು ನಿ.ಪಿ. 2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ. 2(ಎ) ಎಂದು,

C.W. 1 PW 1

1 ಮತ್ತು 2 ನೇ ಆರೋಪಿತರಿಗೆ ಕಾರಣ ಕೇಳಿ ನೀಡಿದ ನೊಟೀಸನ್ನು ನಿ.ಪಿ. 3 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 3(ಎ) ಎಂದು,

1 ಮತ್ತು 2 ನೇ ಆರೋಪಿತರಿಗೆ ನಿ.ಪಿ. 3 ನೊಟೀಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಯನ್ನು ಕ್ರಮವಾಗಿ ನಿ.ಪಿ. 4 ಮತ್ತು 5 ಎಂದು,

1 ಮತ್ತು 2 ನೇ ಆರೋಪಿತರು ಘಟನಾ ಸ್ಥಳದ ಕಾರ್ಖಾನೆ ಪರವಾನಿಗೆಯನ್ನು ನವೀಕರಿಸಲು ನೀಡಿದ ಅರ್ಜಿಯನ್ನು ನಿ.ಪಿ. 6 ಎಂದು,

ಘಟನಾ ಸ್ಥಳದ ಕಚ್ಚಾ ನಕಾಶೆಯನ್ನು ನಿ.ಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 7(ಎ) ಎಂದು,

ಮೃತನ ಮರಣೋತ್ತರ ಪರೀಕ್ಷೆಯ ನಕಲು ಪ್ರತಿಯನ್ನು ಹಾಜರುಪಡಿಸಿದ್ದು, ಸದರಿ ಪ್ರತಿಯು ನಕಲು ಪ್ರತಿ ಆಗಿರುವುದರಿಂದ ಅದನ್ನು ನಿಶಾನೆಯನ್ನಾಗಿ ಗುರುತಿಸಿದ್ದು ಇರುವುದಿಲ್ಲ.

ಅಭಿಯೋಜನಾ ಅನುಮತಿ ಆದೇಶದ ಪ್ರತಿಯನ್ನು ಆರೋಪಿ ಪರ ವಕೀಲರು ಪೂರಾವೆಗೆ ಒಳಪಟ್ಟು ಗುರುತಿಸಲು ತಿಳಿಸಿದ್ದು, ಅದನ್ನು ಪೂರಾವೆಗೆ ಒಳಪಟ್ಟು ನಿ.ಪಿ. 8 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 8(ಎ) ಎಂದು,

**(ಈ ಹಂತದಲ್ಲಿ ಸಿ.ಡಿ.ಯು ನ್ಯಾಯಾಲಯದ ಕಡತದಲ್ಲಿ ಸಿಗದೇ ಇರುವುದರಿಂದ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

Sd/-

ಪ್ರ.ದ.ನ್ಯಾ.ದಂ. ಕುಮಟಾ